**ಹೆಚ್.ಆರ್.ಸಿ ಸಂಖ್ಯೆ: 4089/10/13/16 (ಬಿ-3), ದಿನಾಂಕ 5/1/2019**

ಶ್ರೀ ಎಸ್ ಮಹೇಶ್‌ಕುಮಾರ್, ಮ್ಯಾನೇಜರ್ ಜಸ್ಟೀಸ್ ಅಂಡ್‌ಕೇರ್, ನಂ.16/9, ವಸಂತ ವಿಹಾರ, ನವದೆಹಲಿ 110057, ಅವರುಕರ್ನಾಟಕರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆದೂರು ಸಲ್ಲಿಸಿ, ದಿನಾಂಕ 29/1/2016 ರಂದುಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ, ಕಾರ್ಮಿಕಇನ್‌ಸ್ಪೆಕ್ಟರ್ ಮಾಲೂರು, ಸಿಡಬ್ಲ್ಯೂಸಿ ಸದಸ್ಯರು ಮತ್ತು ಮಾಲೂರು ಪೊಲೀಸರ ಸಹಾಯದಿಂದ ಶ್ರೀ ಸುಬ್ರಮಣ್ಯ ಮತ್ತು ನೇತಾಜಿಅವರಜಮೀನಿನಲ್ಲಿ ಜೀತದಾಳುಗಳಾಗಿದ್ದ ನಾಲ್ಕು ಮಕ್ಕಳಾದ 1) ವೆಂಕಟೇಶ್ ಬಿನ್ ನಾಗರಾಜು, 17 ವರ್ಷ 2) ರಾಜಕುಮಾರ್ ಬಿನ್ ರಾಜಪ್ಪ, 16 ವರ್ಷ 3) ಮುರುಗೇಶ್ ಬಿನ್ ರಾಜಪ್ಪ, 16 ವರ್ಷ ಮತ್ತು 4) ಮುನಿರಾಜ ಬಿನ್ ಸುರತಪ್ಪ ಅವರುಗಳನ್ನು ರಕ್ಷಿಸಿದ್ದು ಅವರಿಗೆಈವರೆಗೆಜೀತಮುಕ್ತ ಪ್ರಮಾಣ ಪತ್ರವನ್ನಾಗಲೀ, ಪರಿಹಾರವನ್ನಾಗಲೀ ನೀಡಿರುವುದಿಲ್ಲ. ಆದುದರಿಂದ ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮಜರುಗಿಸುವಂತೆಕೋರಿದ್ದಾರೆ. ಜಿಲ್ಲಾಧಿಕಾರಿಗಳು, ಕೋಲಾರಜಿಲ್ಲೆ, ಅವರ ನಿರ್ದೇಶನದ ಮೇರೆಗೆ ಉಪವಿಭಾಗಾಧಿಕಾರಿಗಳು, ಕೋಲಾರಅವರು ನೇರವಾಗಿಆಯೋಗಕ್ಕೆ ವರದಿ ಸಲ್ಲಿಸಿ ಮಾಲೂರುತಾಲ್ಲೂಕು ಲಕ್ಕೂರು ಹೋಬಳಿ ಗುಟ್ಟಹಳ್ಳಿ ಗ್ರಾಮದಲ್ಲಿಯ ಜೀತದಾಳುಗಳನ್ನು ಬಿಡುಗಡೆ ಮಾಡಿರುವ ಬಗ್ಗೆ ಪ್ರಮಾಣ ಪತ್ರಗಳನ್ನು ಕಳುಹಿಸಿದ್ದಾರೆ. ಸದರಿ ವರದಿಯ ಪ್ರತಿಯನ್ನುದೂರುದಾರರಅಭಿಪ್ರಾಯಕ್ಕಾಗಿ ಕಳುಹಿಸಿದ್ದು, ಅಭಿಪ್ರಾಯ ಬಂದಿರುವುದಿಲ್ಲ. ಕೋಲಾರ ಉಪವಿಭಾಗಾಧಿಕಾರಿಗಳ ಪತ್ರವನ್ನು ಪರಿಶೀಲಿಸಲಾಗಿ, ಜೀತದಾಳುಗಳಿಗೆ ಪರಿಹಾರ ಪಾವತಿಸಿರುವ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ಆದುದರಿಂದ ಉಪವಿಭಾಗಾಧಿಕಾರಿಗಳ ಕಚೇರಿಯ ಪತ್ರ ದಿನಾಂಕ 16/1/2017 ಮತ್ತುಆಯೋಗದ ಪತ್ರ ದಿನಾಂಕ 16/2/2017 ರ ಪತ್ರದ ಪ್ರತಿಗಳನ್ನು ಲಗತ್ತಿಸಿದೆ. ಜೀತದಾಳುಗಳಿಗೆ ಪರಿಹಾರ ಪಾವತಿಸಲಾಗಿದೆಯೇಅಥವಾಇಲ್ಲವೇ?ಎಂಬುದರ ಬಗ್ಗೆ ಖುದ್ದಾಗಿ ಪರಿಶೀಲಿಸಿ, ನಿಯಮಾನುಸಾರಅಗತ್ಯಕ್ರಮಕೈಗೊಂಡಕ್ರಮದ ಬಗ್ಗೆ ಒಂದು ತಿಂಗಳೊಳಗಾಗಿ ಆಯೋಗಕ್ಕೆ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು, ಕೋಲಾರಜಿಲ್ಲೆ, ಅವರಿಗೆ ಆದೇಶಿಸಿ, ಪ್ರಕರಣವನ್ನು ಮುಕ್ತಾಯ ಮಾಡಲಾಗಿದೆ.